2022 ಹೇಗಿರಬೇಕು?



## ದಯಾಳು ಸುಂದರಿಗೆ ಒಂದು ಖಾಲಿ ಕಾಗದ



ಹಳೆಯ ಗಾಯಗಳಿನ್ನೂ ಮಾದಿಲ್ಲ, ಹೊಸ ವರುಷದ ಹೊಸ್ತಿಲಲ್ಲಿ ನಿಂತಿದ್ದೇವೆ, ಕಾಲಸುಂದರಿ ನಿನ್ನಿಂದೇನೂ ಬಯಸಲಾರೆವು ಸದ್ಯಕ್ಕೆ, ಈ ಖಾಲಿ ಕಾಗದವ ಒಪ್ಪಿಸಿಕೊ.

ದಯಾಳು ಸುಂದರಿ, ಕಳೆದ ಮೂರು ವಸಂತಗಳಿಗೆ ಕರುಣೆಯೇ ಇರಲಿಲ್ಲ, ನಮ್ಮ ಪ್ರಭುಗಳಿಗೂ. ಮಕ್ಕಳು ಸಾಲಿ ಮುಖ ನೋಡಲಿಲ್ಲ, ಹಿರಿಕಿರಿಯ ಬಂಧುಗಳನೇಕರು ಉಸಿರು ಮರೆತು ಮತ್ತೆ ಮನೆಗೆ ಮರಳಲಿಲ್ಲ, ಕಾಲದ ಕೃಪೆಯೋ ಪ್ರಭುಗಳ ಕರುಣೆಯೋ ಮಹಾವಲಸೆಯ ಸುಟ್ಟ ಪಾದಗಳು ಇನ್ನೂ ಹಾಡು ಹೇಳುತ್ತಿವೆ ಕಾಲ ಕಾಲದ ಆಳದ ಸಂಕಟವ ಪದಕಟ್ಟಿ.

ಹೊಸ ಕಾಲದ ಬಿಳಿ ಕ್ಯಾನ್ವಾಸಿನಲ್ಲಿ ಬಣ್ಣದ ಕನಸುಗಳನೇನೂ ನಾವು ಬರೆಯುವುದಿಲ್ಲ. ಬೆವರು, ರಕ್ತ, ಕಣ್ಣೀರು ಒಂದು ಮಾಡಿ ನಾವು ಚಿತ್ರ ಬರೆಯುವುದು ಕಾಲವೋ ನಮ್ಮವರೋ ಪ್ರಭುಗಳೋ ಅಳಿಸೋದು ಕೆಡಿಸೋದು ಈ ಆಟ ಈ ಸಾರಿ ಬೇಡ.

ಸುಮ್ಮಾನವೇ ಸಾಕು. ಈ ಬದುಕಿಗೆ ಒಂದು ಪಾಸ್ ಬೇಕು. ಓಡುವ ಕನಸಿನ ಹುಡುಗರು ನಾವು ಸಾಧ್ಯವಾದರೆ ನಡೆಯುತ್ತೇವೆ, ಇಲ್ಲ ನಿಲ್ಲುತ್ತೇವೆ, ಕಾಲು ಮಾತ್ರ ಮುರಿಯದಿರಲಿ.

ತುಂಬಾ ತಡವರಿಸಿ ಈ ಖಾಲಿ ಕಾಗದ ಬರೆದಿರುವೆ. ನಾವು ನಿನಗೆ ಏನೂ ಹೇಳಿಲ್ಲ, ಎಲ್ಲವೂ ನಿನಗನ್ನಿಸಿದ್ದು ಅಷ್ಟೇ.

ಕರುಣಾನಿಧಿಯಾದ ಬುದ್ಧ ನಮ್ಮ ನಿನ್ನ ಜೊತೆಗಿರಲಿ.

ನಮಾಮಿ.

**-ವೀರಣ್ಣ ಮಡಿವಾಳರ,** ಶಿಕ್ಷಕ–ಕವಿ, ಕಲಕೇರಿ

ನೀನೂ ಆಶಿಸುವೆಯಾ?

ಪ್ರಿಯ ಬಂಧು, ನಿನಗೆ ಅಸಾಧ್ಯವಾದುದು ಏನಿದೆ? ನಿನ್ನ ಪಿತೃ ಪಿತಾಮಹರ ಸಿದ್ಧಿಗೆ ತುದಿಮೊದಲಾದರೂ ಯಾವುದು? ಆದರೆ, ಈ ಸಿದ್ಧಿಯ ಹಾದಿಯಲ್ಲಿ ಕಳೆದುಕೊಂಡದ್ದು ಏನೆಲ್ಲವನ್ನು? ಗಡಿಯಾರವನ್ನು ಕಾಲಿಗೆ ಕಟ್ಟಿಕೊಂಡಂತೆ ಓಡುತ್ತಿರುವ ನಾಗರಿಕ ಜಗತ್ತಿಗೆ ಆಗಾಗ ಹಿಂತಿರುಗಿ ನೋಡುವ ವ್ಯವಧಾನವೂ ಬೇಕಲ್ಲವೆ? ವಿಶ್ವಕುಟುಂಬ ನಡೆದುಬಂದ ಹಾದಿಯ ಅವಲೋಕನ ಎಂದರೆ, ಅದು ನನ್ನ ಪಿತೃ ಪಿತಾಮಹರ ಚರಿತ್ರೆಯ ನೋಟವೂ ಹೌದು. ಆ ಪುಟಗಳನ್ನೊಮ್ಮೆ ತಿರುವಿಹಾಕಿದರೆ, ಉದ್ದಕ್ಕೂ ಕವಿದಿರುವ ಕಗ್ಗತ್ತಲಿನ ನಡುವೆಯೂ ಬೆಳಕಿನ ತೇಜೋಪುಂಜಗಳು ಕತ್ತಲೆಯನ್ನೆಲ್ಲ ಆಪೋಶನ ತೆಗೆದುಕೊಳ್ಳುವಂತೆ ಕಂಗೊಳಿಸುತ್ತಿವೆ. ಬುದ್ಧ, ಮಹಾವೀರ, ಕ್ರಿಸ್ತ, ಪೈಗಂಬರ್, ಬಸವ, ಅಕ್ಕಮಹಾದೇವಿ, ಗಾಂಧಿ, ಅಂಬೇಡ್ಕರ್, ತೆರೇಸಾ – ಬೆಳಕಿಗೆ ಎಷ್ಟೊಂದು ಹೆಸರು. ಇಂಥ ಬೆಳಕಿನ ಸಣ್ಣದೊಂದು ಕಿಡಿಯನ್ನಾದರೂ ಕಾಣಲು ಸಾಧ್ಯವಾದರೆ ಅದು ನನ್ನ ಬದುಕಿನ ಭಾಗ್ಯವೇ ಸರಿ.

'ಇತ್ತುಗಳ ಧ್ವಜವ ಹಿಡಿದೆತ್ತಿ ನಿಲ್ಲು ಮಗು, ಇದೆಯ ಹೃದಯದ್ರಾವ ಬೇಡ ನಿನಗೆ'. ಇದು ಕವಿ ಅಡಿಗರ ಮಾತಲ್ಲವೆ? ಸಾಕಿನ್ನು ಆ ಜೋತುಬೀಳುವ ಆಟ. ಪ್ರಿಯ ಬಂಧು, ಮಾನವೀಯತೆ ಎರಕಗೊಂಡ ನಿನ್ನ ಸೃಜನಶೀಲ ಸಾಹಸಗಳ, ಸ್ವಂತಿಕೆಯ ತುಡಿತಗಳ, ಮಾನವೀಯ ಮಿಡಿತಗಳ ಕಾಣುವಾಸೆ ನನ್ನದು. ನನಗೆ ಗೊತ್ತು, ನೀವೆಲ್ಲ ಕೊರೊನಾ ವೈರಸ್‌ನ ಆತಂಕದಲ್ಲಿದ್ದೀರಿ. ನನ್ನ ಕಳೆದಿಬ್ಬರು ಒಡಹುಟ್ಟುಗಳ ಅವಧಿಯಲ್ಲಿ ಜಾರಿಗೊಂಡ ಲಾಕ್‌ಡೌನ್‌ಗಳ ಬಗ್ಗೆಯೂ ನಾನು ಕೇಳಿ ಬಲ್ಲೆ. ನಾನು ಕೂಡ ಕೊರೊನಾ ಕಲಂಕದ ಜೊತೆಗೇ ನಡಿಗೆ ಆರಂಭಿಸಿದ್ದೇನೆ. ಆದರೆ, ನನಗೆ ಭರವಸೆಯಿದೆ. ಇಂಥ ಎಷ್ಟು ವೈರಸ್‌ಗಳನ್ನು,